MVC.1209/2021
P.W.1

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ- 04.12.2024.

ಮುಖ್ಯ ವಿಚಾರಣೆಃ- ಅರ್ಜಿದಾರರ ಪರವಾಗಿಃ-ಶ್ರೀ ಸಿ ಕೆ ಎಂ ವಕೀಲರಿಂದಃ-

ನಾನು ನಮ್ಮ ಸಂಸ್ಥೆಯ ನೌಕರನಾಗಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಸಹಿ ನನ್ನದೇ ಎಂದು ಪ್ರಮಾಣೀಕರಿಸುತ್ತೇನೆ.

| | | |
|---|---|---|
| ನಿ.ಪಿ-1 | : | ಅಧಿಕಾರ ಪತ್ರ |
| ನಿ.ಪಿ-2 | : | ದೂರು ಅರ್ಜಿಯ ದೃಢೀಕೃತ ನಕಲು |
| ನಿ.ಪಿ-3 | : | ಪ್ರ.ವ ವರದಿಯ ದೃಢೀಕೃತ ನಕಲು |
| ನಿ.ಪಿ-4 | : | ಸ್ಥಳ ಮಹಜರ್ ನ ದೃಢೀಕೃತ ನಕಲು |
| ನಿ.ಪಿ-5 | : | ಐ.ಎಂ.ವಿ ವರದಿಯ ದೃಢೀಕೃತ ನಕಲು |
| ನಿ,ಪಿ-6 | : | ಸಾರಿಗೆ ಆಧಾಯದ ವಿವರ |
| ನಿ,ಪಿ-7 | : | ಜಾಬ್ ಕಾರ್ಡ್ |
| ನಿ,ಪಿ-8 | : | ಅಂತಿಮ ವರದಿ |
| ನಿ,ಪಿ-9 | | ಅಪಘಾತ ಸ್ಥಳದ ನಕಾಶೆ |

ಪಾಟೀಸವಾಲು 2ನೇ ಎದುರುದಾರರ ಪರ ಶ್ರೀ ಯು ಎಂ ಸಿ ವಕೀಲರಿಂದಃ

ನಮ್ಮ ವಾಹನ ಧರ್ಮಸ್ಥಳದಿಂದ ಬೆಂಗಳೂರಿಗೆ ಹೋಗುತ್ತಿತ್ತು. ನಿ.ಪಿ-9ರ ಪ್ರಕಾರ ಅಪಘಾತದ ಸ್ಥಳದ ಇರುವ ಜಾಗ ತಿರುವು ರಸ್ತೆಯಾಗಿದೆ ಎಂದರೆ ಸರಿ. ಗ್ಯಾಸ್ ಟ್ಯಾಂಕರ್ ಲಾರಿ ಎದುರುಕಡೆಯಿಂದ ಬರುತ್ತಿತ್ತು. ಅಪಘಾತದ ಸ್ಥಳ ರಸ್ತೆಯ ಮಧ್ಯದಲ್ಲಿ ಇದೆ ಎಂದು ನಿ.ಪಿ-9 ರಲ್ಲಿ ಕಂಡುಬರುತ್ತದೆ ಎಂದರೆ ಸರಿ. ನಮ್ಮ ತರಬೇತಿಯ ಅವಧಿಯಲ್ಲಿ ಯಾವುದೇ ಅಪಘಾತದ ಘಟನೆಯಾದ ತಕ್ಷಣವೇ ದೂರು ಕೊಡಬೇಕೆಂದು ಹೇಳಿರುತ್ತಾರೆ ಎಂದರೆ ಸರಿ. ಆ ಪ್ರಕಾರವೇ ನಾನೇ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ಅಪಘಾತವು ನಮ್ಮ ವಾಹನದ ಅತೀ ವೇಗ ಮತ್ತು ಅಜಾಗರೂಕತೆಯಿಂದ ಅಗಿರುತ್ತದೆ ಎಂದರೆ ಸರಿಯಲ್ಲ. ಟ್ಯಾಂಕರ್ ಲಾರಿ ಉದ್ದದ ವಾಹನ ಎಂದರೆ ಸರಿ. ಆದ್ದರಿಂದ ಅದು ರಸ್ತೆಯ ತಿರುವಿನಲ್ಲಿ ವೇಗದಿಂದ ಹೋಗಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಬೆಂಗಳೂರು ಕಡೆಯಿಂದ

This is a True Copy of the Court Records Online. Authenticated @ districts.ecourtsindia.com/cnr/KAHS020018062022/truecopy/order-1.pdf

www.ecourtsindia.com

ಬರುವ ದಾರಿಯಲ್ಲಿ ಮೇಲ್ಭಾಗದಿಂದ ಬರುವಾಗ ಅತೀ ವೇಗದಿಂದ ಬರುತ್ತಿತ್ತು ಎಂದು ಹೇಳುತ್ತಾರೆ. ನಮ್ಮ ವಾಹನದ ಬಲಭಾಗಕ್ಕೆ ಜಖಂ ಆಗಿರುತ್ತದೆ. ಜಖಂ ಗಳ ಖರ್ಚು ವೆಚ್ಚದ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದರೆ ಸರಿ. ಅದರ ಆದಾಯದ ಬಗ್ಗೆಯು ನಮಗೆ ಮಾಹಿತಿ ಇಲ್ಲ ಎಂದರೆ ಸರಿ. ವಾಹನ ಎಷ್ಟು ದಿವಸ ರಿಪೇರಿಗೆ ಇತ್ತು ಎಂದು ಹೇಳಲು ಅಗುವುದಿಲ್ಲ ಎಂದರೆ ಸರಿ. ರಿಪೇರಿ ಮಾಡುವವರಿಗೆ ಯಾವ ರೀತಿಯ ಸಂಬಳ ಕೊಡುತ್ತಾರೆ, ಎಷ್ಟು ಕೊಡುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತವಾಗಿದ್ದರು ಸಹ ನಮ್ಮ ಇಲಾಖೆಯವರು ನೀಡಿರುವ ತರಬೇತಿಯ ಆಧಾರದ ಮೇಲೆ ನಾನೇ ನನ್ನ ತಪ್ಪಿದರು ಮೊದಲೇ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಸನ.

ಸಾಕ್ಷಿದಾರರ ಸಹಿಃ

This is a True Copy of the Court Records Online. Authenticated @ districts.ecourtsindia.com/cnr/KAHS020018062022/truecopy/order-1.pdf

www.ecourtsindia.com